# ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

95

MD RGRHCL 24 RSG 2016, /4508

Date:18.11.2016

ಇವರಿಗೆ,

ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು,
ಎಲ್ಲಾ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು,
ಜಿಲ್ಲಾ ಪಂಚಾಯತ್.

ಮಾನ್ಯರೇ,

ವಿಷಯ : ಸರ್ಕಾರದಿಂದ ವಿವಿಧ ವಸತಿ ಯೋಜನೆಗಳಡಿ ಸಾಲ/ಸಹಾಯಧನ ಪಡೆದು ಮನೆ ನಿರ್ಮಿಸಿದ್ದು, 15 ವರ್ಷಗಳು ಪೂರ್ಣಗೊಳಿಸಿದ ಫಲಾನುಭವಿಗಳ ಮನೆಯನ್ನು ಅಡಮಾನದಿಂದ ಮುಕ್ತಗೊಳಿಸುವ(ಆರ್.ಟಿ.ಸಿಯಲ್ಲಿ ಋಣ ಮುಕ್ತಗೊಳಿಸುವ) ಬಗ್ಗೆ.

ಉಲ್ಲೇಖ : ಸರ್ಕಾರದ ಆದೇಶ ಸಂ:ವಇ 31 ಹೆಚ್ಎಹೆಚ್ 2013, ದಿನಾಂಕ:03.09.2014

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ಆಶ್ರಯ ಹಾಗೂ ಮತ್ತಿತರ ವಸತಿ ಯೋಜನೆಗಳಡಿ ಸಾಲ/ಸಹಾಯಧನ ಪಡೆದು ಮನೆ ನಿರ್ಮಿಸಿದ ಫಲಾನುಭವಿಗಳಿಂದ ಬರಬೇಕಾಗಿದ್ದ, ಬಾಕಿ ಸಾಲ ಮತ್ತು ಬಡ್ಡಿಯನ್ನು ಸಂಪೂರ್ಣ ಮನ್ನಾ ಮಾಡಲಾಗಿರುತ್ತದೆ.

ಸರ್ಕಾರದ ಆದೇಶದ ಪ್ರಕಾರ ಸಾಲ/ಸಹಾಯಧನ ಪಡೆದ ಫಲಾನುಭವಿಗಳು ನಿರ್ಮಿಸಿದ ಮನೆಯನ್ನು ಸರ್ಕಾರಕ್ಕೆ 15 ವರ್ಷಗಳ ಅವಧಿಗೆ ಅಡಮಾನ ಮಾಡಿಕೊಳ್ಳಲಾಗಿರುತ್ತದೆ. ಪ್ರಸ್ತುತ ಸರ್ಕಾರವು ಫಲಾನುಭವಿಗಳಿಂದ ಬರಬೇಕಾಗಿದ್ದ, ಬಾಕಿ ಸಾಲ ಮತ್ತು ಬಡ್ಡಿಯನ್ನು ಸಂಪೂರ್ಣ ಮನ್ನಾ ಮಾಡಲಾಗಿರುವುದು ಹಾಗೂ ಮನೆ ನಿರ್ಮಿಸಿಕೊಂಡು ವಾಸವಾಗಿದ್ದು 15 ವರ್ಷಗಳ ಅವಧಿ ಪೂರ್ಣಗೊಳಿಸಿದ ಫಲಾನುಭವಿಗಳ ಮನೆಯನ್ನು ಅಡಮಾನದಿಂದ ಮುಕ್ತಗೊಳಿಸಲು(ಆರ್.ಟಿ.ಸಿಯಲ್ಲಿ ಋಣ ಮುಕ್ತಗೊಳಿಸುವ) ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದೆ.

1. **ಸ್ವಂತ ನಿವೇಶನದಲ್ಲಿ** ಸರ್ಕಾರದ ವಸತಿ ಯೋಜನೆಗಳಡಿ ಸಾಲ/ಸಹಾಯಧನ ಪಡೆದು ಮನೆ ನಿರ್ಮಿಸಿಕೊಂಡು ವಾಸವಾಗಿದ್ದು 15 ವರ್ಷಗಳು ಪೂರ್ಣಗೊಂಡ ಫಲಾನುಭವಿಗಳ ಮನೆಯನ್ನು ಅಡಮಾನದಿಂದ ಮುಕ್ತಗೊಳಿಸಲು ಕೂಡಲೇ ಕ್ರಮವಹಿಸುವುದು.

2. **ಸರ್ಕಾರದಿಂದ ನಿವೇಶನ ಪಡೆದು ಹಾಗೂ ವಸತಿ ಯೋಜನೆಗಳಡಿ** ಸಾಲ/ಸಹಾಯಧನ ಪಡೆದು/ವೈಯಕ್ತಿಕ ಅನುದಾನದಿಂದ ಮನೆ ನಿರ್ಮಿಸಿಕೊಂಡು ವಾಸವಾಗಿದ್ದು 15 ವರ್ಷಗಳು ಪೂರ್ಣಗೊಂಡ ಫಲಾನುಭವಿಗಳ ಮನೆಯನ್ನು ಅಡಮಾನದಿಂದ ಮುಕ್ತಗೊಳಿಸಲು ಕ್ರಮವಹಿಸುವುದು.

ಮೇಲ್ಕಂಡ ಎರಡೂ ಪ್ರಕರಣಗಳಲ್ಲಿ ಮನೆ ನಿರ್ಮಿಸಿಕೊಂಡು ವಾಸವಾಗಿದ್ದು 15 ವರ್ಷಗಳು ಪೂರ್ಣಗೊಂಡ ಫಲಾನುಭವಿಗಳ ಮನೆಯನ್ನು ಅಡಮಾನದಿಂದ ಬಿಡುಗಡೆಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲು ಸೂಚಿಸಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಮುನೀಷ್ ಮೌದ್ಗಿಲ್. ಭಾ.ಆ.ಸೇ
ವ್ಯವಸ್ಥಾಪಕ ನಿರ್ದೇಶಕರು

19/11/16

ನೊಂದಾಯಿತ ಕಛೇರಿ : #1,2,3,4, ಐ.ಟಿ. ಪಾರ್ಕ್, 1ನೇ ಮಹಡಿ, 4ನೇ ಮುಖ್ಯರಸ್ತೆ, ರಾಜಾಜಿನಗರ ಕೈಗಾರಿಕಾ ಪ್ರದೇಶ, ರಾಜಾಜಿನಗರ, ಬೆಂಗಳೂರು – 560 010.
ಕಛೇರಿ : 91-80-2311 8888, Extn.: ಪಿಐ ವಿಭಾಗ- 25 to 30, ತಾಂತ್ರಿಕ - 34 to 36, ಆರ್ಥಿಕ - 37 to 40, ಆಡಳಿತ - 42 & 43, ಗಣಕ ವಿಭಾಗ- 45 to 47,
ಫ್ಯಾಕ್ಸ್ : 91-80-2314 3130, ಈ ಮೇಲ್: rgrhcl@nic.in, rgrhcl@rediffmail.com ವೆಬ್‌ಸೈಟ್ : http://ashraya.kar.nic.in